Kerala Gazette No. 9 dated 27th February, 2018.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಬಿ) ಇಲಾಖೆ

## ಅಧಿಸೂಚನೆ

ನಂಬ್ರ 16671/ಲೆಗ್. ಬಿ2/2016/ಕಾನೂನು. *ತಿರುವನಂತಪುರಂ, 2016 ನವೆಂಬರ್ 23, 1192 ವೃಶ್ಚಿಕ 8/ 1938 ಅಗ್ರಹಾಯನ 2.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರುಮಾಡಿದಂತಹ ಮಸೂದೆಗೆ 2016 ನವೆಂಬರ್ 21ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2016ರ 19ನೇ ಅಧಿನಿಯಮ

## 2016ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ

2008ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2008ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ ಅಧಿನಿಯಮ (2008ರ 28)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೇಳನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2016ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 3ಎ ವಿಭಾಗದ ಬಿಟ್ಟುಬಿಡುವಿಕೆ.—2008ರ ಕೇರಳ ಭತ್ತದ ಬಯಲು-ತರಿಜಮೀನು ಸಂರಕ್ಷಣೆ ಅಧಿನಿಯಮ (2008ರ 28) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 3ಎ ವಿಭಾಗವನ್ನು ಬಿಟ್ಟುಬಿಡತಕ್ಕದ್ದು.

3. ರಕ್ಷಣೆ.—ಪ್ರಧಾನ ಅಧಿನಿಯಮದ 3ಎ ವಿಭಾಗವನ್ನು ಬಿಟ್ಟುಬಿಡಲಾಗಿದ್ದರೂ ಸಹ, ಪ್ರಧಾನ ಅಧಿನಿಯಮದ ಕಾನೂನು ಕ್ರಮಗಳನ್ನು ಪಾಲಿಸಿ ಭೂಮಿಯ ರೂಪಾಂತರಗೊಳಿಸುವಿಕೆಯನ್ನೋ ಸುಧಾರಣೆಗೊಳಿಸುವಿಕೆಯನ್ನೋ ಅಂತಿಮವಾಗಿ ಕ್ರಮಬದ್ಧಗೊಳಿಸಿ ನೀಡಿರುವಂತಹ ವಿಷಯದಲ್ಲಿ, ಅಂತಹ ಕ್ರಮಬದ್ಧಗೊಳಿಸುವಿಕೆಯು ಸಿಂಧುವಾಗಿರುವುದು ಹಾಗೂ ಆ ರೀತಿಯಲ್ಲಿ ಆರ್ಜಿಸಿದ, ಪ್ರಾಪ್ತವಾಗಿಸಿದ ಅಥವಾ ಪಡೆದಂತಹ ಯಾವುದೇ ಹಕ್ಕಿಗೆ, ವಿಶೇಷ ಹಕ್ಕಿಗೆ, ಹೊಣೆಗಾರಿಕೆಗೆ ಅಥವಾ ಬಾಧ್ಯತೆಗೆ ಸಂಬಂಧಿಸಿದಂತಹ ಯಾವುದೇ ಕಾನೂನು ಕ್ರಮಗಳಿಗೆ ಅಥವಾ ಪರಿಹಾರಕ್ಕೆ ಪರಿಣಾಮ ಬೀರುವಂತದ್ದಲ್ಲ ಹಾಗೂ ಅಂತಹ ಯಾವುದೇ ಕಾನೂನು ಕ್ರಮವನ್ನೋ ಪರಿಹಾರವನ್ನೋ ಈ ಅಧಿನಿಯಮವು ಜಾರಿಗೆ ಬಂದಿರಲಿಲ್ಲವೆಂಬಂತೆ ಆರಂಭಿಸುವುದೋ ಮುಂದುವರೆಸುವುದೋ ಅಥವಾ ಜಾರಿಗೊಳಿಸುವುದೋ ಮಾಡಬಹುದಾಗಿದೆ.